**O S No. 5/2019** **PW-4**

**ದಿನಾಂಕಃ 11-08-2026 ರಂದು ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ:- ವಾದಿ ಪರ ಶ್ರೀ RI ವಕೀಲರಿಂದಃ-**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯದಿಂದ ಕೂಡಿದ್ದು ಅದನ್ನು ನನ್ನ ಸೂಚನೆಯ ಮೇರೆಗೆ ತಯಾರಿಸಲಾಗಿರುತ್ತದೆ ಮತ್ತು ಅದನ್ನು ನಾನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ಅದರಂತೆ ವಾದಿಯವರು ಸಲ್ಲಿಸಿದ್ದ ವಾದ ಪತ್ರ ಮತ್ತು ದಾಖಲಾತಿಗಳನ್ನು ಪರಗಣಿಸಿ ದಾವೆಯನ್ನು ಡಿಕ್ರಿ ಮಾಡಲು ವಿನಂತಿ.

**ಪಾಟಿ ಸವಾಲು:- ಪ್ರತಿವಾದಿ ಪರ ಶ್ರೀ SKD ವಕೀಲರಿಂದ**

ಸೇಡಂ-ಕೊಡಂಗಲ ಮುಖ್ಯ ರಸ್ತೆಯಿಂದ ಮಶಮ್ಮ ಗುಡಿಗೆ ಹೋಗಲು ಹನದಿ ಇದೆ ಎಂದರೆ ಸರಿ. ಸರ್ವೆ ನಂ. 50 ರಲ್ಲಿ 7 ರಿಂದ 8 ಹಿಸ್ಸಗಳಿವೆ. ದಾವಾ ಸ್ವತ್ತಿನ ಸರ್ವೆ ನಂ. 50/17 ಮತ್ತು ಅದರ ವಿಸ್ತೀರ್ಣ 6 ಗುಂಟೆ ಇರುತ್ತದೆ. ಇನ್ನೊಂದು ಸರ್ವೆ ನಂ. 50/11 ಅದರ ವಿಸ್ತೀರ್ಣ 19 ಗುಂಟೆ ಇರುತ್ತದೆ. ಸರ್ವೆ ನಂ. 50/17 ಮತ್ತು 50/11 ಆದ ನಂತರ ಪ್ರತಿವಾದಿರವರ ಜಮೀನು ಇರುತ್ತದೆ ಎಂದರೆ ಸರಿ. ಅದರ ವಿಸ್ತೀರ್ಣ 5 ಎಕರೆ 25 ಗುಂಟೆ ಎಂದರೆ ಸರಿ.

ಮೃತ ಅನಿಲಕುಮಾರ ಇವರು ಬದುಕಿದ್ದಾಗ ಸದರಿ ಜಮೀನು ಕೃಷಿಯೇತರ ಜಮೀನು ಎಂದು ಮಂಜೂರಾಗಿದೆ ಎಂದರೆ ಸರಿ. ತದನಂತರ ಬಡಾವಣೆ ಎಂದು ಮಂಜೂರಾಗಿದೆ ಎಂದರೆ ಸರಿ. ಅದರಂತೆ ಸರ್ವೆ ನಂ. 50 ರಲ್ಲಿ ರುವ ತನ್ನ ಜಮೀನಿನಲ್ಲಿ ಮೃತ ಅನಿಲಕುಮಾರ ಕಬ್ಜೆಯಲ್ಲಿ ಇದ್ದರು ಮತ್ತು ಆತನ ಮರಣೋತ್ತರ ಅವರ ತಂದೆ ಮತ್ತು ತಾಯಿ ಕಬ್ಜೆಯಲ್ಲಿ ಇದ್ದಾರೆ ಎಂದರೆ ಸರಿ. ಪ್ರತಿವಾದಿರವರ ಹೊಲಕ್ಕೆ ಹೋಗಲು ಸೇಡಂ-ಕೊಡಂಗಲ ರಸ್ತೆನಯಿಂದ ಮಶಮ್ಮನ ಗುಡಿಗೆ ಹೋಗುವ ರಸ್ತೆಯನ್ನು ಹೊರತುಪಡಿಸಿ ಬೇರೆ ಯಾವುದೇ ರಸ್ತೆ ಇಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅದು ಕಾಲುದಾರಿ ಇದೆ ಎಂದು ನುಡಿಯುತ್ತಾರೆ. ಸದರಿ ರಸ್ತೆ ಕಾಲುದಾರಿ ಇರುವುದನ್ನು ಸರ್ವೆ ಇಲಾಖೆಯಲ್ಲಿ ನಮೂದಾಗಿರುತ್ತದೆ ಅದರ ದಾಖಲಾತಿಗಳನ್ನು ನಾನು ನೋಡಿದ್ದೇನೆ. ವಾದಿಯವರು ನನ್ನ ಊರಿನವರು

ಇರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕಾಲುದಾರಿ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಸಿವಿಲ್ ನ್ಯಾಯಾಧೀಶರು, ಸೇಡಂ**